

بسم اللهِ الرّحمٰن الرّحيم

# ವಿನಯ ಮತ್ತು ನಮ್ರತೆಯ ಬೆಳಕಿನಲ್ಲಿ ಹಝ್ರತ್ ಪೈಗಂಬರ್(ಸ)ರ ಉನ್ನತ ನೈತಿಕತೆಯ ಸುಂದರ ಪ್ರಸ್ತಾಪ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **15–05–2026** ರಂದು ನೀಡಿದ **ಜುಮುಅ ಖುತ್**ಬದ **ಸಾರಾಂಶ)**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّالِّيْنَ۔

*(ತಶಹ್ಹುದ್, ತಅವ್ವುಧ್, ಸೂರತುಲ್ ಫಾತಿಹ ಪಠಿಸಿದ ನಂತರ ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್, ಹೀಗೆ ಹೇಳಿದರು:)*

ಲೋಕದಲ್ಲಿ ಯಾರಾದರೂ ಪರಿಪೂರ್ಣ ಮನುಷ್ಯ ಜನಿಸಿರುವುದಾದರೆ, ಅದು ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಎಂಬುವುದಾಗಿ ನಾವು ನಂಬುತ್ತೇವೆ ಮತ್ತು ದೃಢವಿಶ್ವಾಸ ಹೊಂದಿದ್ದೇವೆ. ಅವರಿಗಿಂತ ಮೊದಲು ಅಥವಾ ನಂತರ ಯಾವುದೇ ಪರಿಪೂರ್ಣ ಮನುಷ್ಯ ಜನಿಸಿಲ್ಲ. ದೇವನ ಹಕ್ಕುಗಳನ್ನು ಪೂರೈಸುವುದಾಗಲಿ ಅಥವಾ ಸೃಷ್ಟಿಗಳ ಹಕ್ಕುಗಳನ್ನು ಪೂರೈಸುವುದಾಗಲಿ, ಹಝ್ರತ್ ಪೈಗಂಬರ್(ಸ)ರ ವ್ಯಕ್ತಿತ್ವದಲ್ಲಿ ಎಲ್ಲ ಉನ್ನತ ನೈತಿಕ ಗುಣಗಳು ಒಗ್ಗೂಡಿರುವುದು ಕಂಡುಬರುತ್ತದೆ. ಅವರ ಅತ್ಯುನ್ನತ ನೈತಿಕ ಗುಣಗಳಲ್ಲಿ ವಿನಯ ಮತ್ತು ನಮ್ರತೆಯ ಗುಣವೂ ಒಂದಾಗಿದೆ. ಇಂದು ನಾನು ಇದೇ ವಿಷಯಕ್ಕೆ ಸಂಬಂಧಿಸಿದಂತೆ ಕೆಲವು ಹದೀಸ್‌ಗಳನ್ನು ಮತ್ತು ಹಝ್ರತ್ ಮಸೀಹ್ ಮೌಊದ್(ಅ)ರ ಕೆಲವು ಮಾತುಗಳನ್ನು ಪ್ರಸ್ತುತಪಡಿಸುತ್ತೇನೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಹಝ್ರತ್ ಪೈಗಂಬರ್(ಸ)ರಿಗಿಂತ ಮಿಗಿಲಾದ ಯಾವುದೇ ಪರಿಪೂರ್ಣ ಮನುಷ್ಯನ ಮಾದರಿ ಲೋಕದಲ್ಲಿಲ್ಲ ಮತ್ತು ಮುಂದೆಯೂ ಕೊನೆಗಾಲದ ವರೆಗೂ ಇರಲು ಸಾಧ್ಯವಿಲ್ಲ. ನೋಡಿರಿ, ದೃಷ್ಟಾಂತಗಳನ್ನು ತೋರಿಸುವ ಪೂರ್ಣ ಅಧಿಕಾರ ಲಭಿಸಿದಾಗಲೂ ಹಝ್ರತ್ ಪೈಗಂಬರ್(ಸ) ಯಾವಾಗಲೂ ದಾಸ್ಯಭಾವದಲ್ಲೇ ಇರುತ್ತಿದ್ದರು ಮತ್ತು ಪದೇ ಪದೇ **'ಇನ್ನಮಾ ಅನ ಬಶರುಮ್ ಮಿಸ್‌ಲುಕುಮ್'** (ನಾನು ಕೇವಲ ನಿಮ್ಮಂತೆಯೇ ಒಬ್ಬ ಮನುಷ್ಯ) ಎಂದೇ ಹೇಳುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಜಂಬಕೊಚ್ಚಿಕೊಳ್ಳುವುದರಿಂದ ಮತ್ತು ಅನಗತ್ಯ ಅಹಂಕಾರದಿಂದ ದೂರವಿರಬೇಕು ಹಾಗೂ ನಮ್ರತೆ ಮತ್ತು ವಿನಯವನ್ನು ಅಳವಡಿಸಿಕೊಳ್ಳಬೇಕು. ನೋಡಿರಿ, ಹಝ್ರತ್ ಪೈಗಂಬರ್(ಸ) ವಾಸ್ತವವಾಗಿ ಎಲ್ಲರಿಗಿಂತ ಶ್ರೇಷ್ಠರು ಮತ್ತು ಹಿರಿಮೆಗೆ ಅರ್ಹರಾಗಿದ್ದರು, ಅವರ ನಮ್ರತೆ ಮತ್ತು ವಿನಯದ ಒಂದು ಉದಾಹರಣೆ ಪವಿತ್ರ ಖುರ್‌ಆನ್‌ನಲ್ಲಿ ಇದೆ. ಒಬ್ಬ ಕುರುಡ ವ್ಯಕ್ತಿಯು ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದು ಪವಿತ್ರ ಖುರ್‌ಆನ್ ಕಲಿಯುತ್ತಿದ್ದನು ಎಂದು ಬರೆಯಲಾಗಿದೆ. ಒಂದು ದಿನ ಹಝ್ರತ್ ಪೈಗಂಬರ್(ಸ)ರ ಬಳಿ ಮಕ್ಕಾದ ಗಣ್ಯರು ಮತ್ತು ನಗರದ ಮುಖಂಡರು ಸೇರಿದ್ದರು ಹಾಗೂ ಅವರೊಂದಿಗೆ ಹಝ್ರತ್ ಪೈಗಂಬರ್(ಸ) ಮಾತುಕತೆಯಲ್ಲಿ ನಿರತರಾಗಿದ್ದರು. ಆಗ ಆ ಕುರುಡ ವ್ಯಕ್ತಿ ಬಂದು ಸ್ವಲ್ಪ ಹೊತ್ತು ಕಾಯ್ದು ನಂತರ ಹೊರಟು ಹೋದನು. ಇದೊಂದು ಸಾಮಾನ್ಯ ವಿಷಯವಾಗಿತ್ತು. ಆದರೆ ಅಲ್ಲಾಹನು ಇದರ ಬಗ್ಗೆ ಒಂದು ಅಧ್ಯಾಯವನ್ನೇ ಅವತೀರ್ಣಗೊಳಿಸಿದನು. ಆಗ ಹಝ್ರತ್ ಪೈಗಂಬರ್(ಸ) ಅವನ ಮನೆಗೆ ಹೋಗಿ ಅವನನ್ನು ತಮ್ಮೊಂದಿಗೆ ಕರೆತಂದು ತಮ್ಮ ಚಾದರದ ಮೇಲೆ ಕುಳ್ಳಿರಿಸಿದರು. ವಾಸ್ತವಿಕ ವಿಷಯವೇನೆಂದರೆ, ಯಾರ ಹೃದಯದಲ್ಲಿ ದೇವನ ಹಿರಿಮೆಯ ಬಗ್ಗೆ ಗಮನವಿರುತ್ತದೋ ಅವರು ಕಡ್ಡಾಯವಾಗಿ ವಿನೀತರು ಮತ್ತು ನಮ್ರತೆಯುಳ್ಳವರು ಆಗಲೇಬೇಕಾಗುತ್ತದೆ, ಏಕೆಂದರೆ ದೇವನ ನಿರಪೇಕ್ಷತೆಯ (ಎಂದರೆ, ಅಲ್ಲಾಹನಿಗೆ ಯಾರ ಸಹಾಯದ ಅಗತ್ಯವೂ ಇಲ್ಲದ) ಕಾರಣದಿಂದ ಅವರು ಯಾವಾಗಲೂ ಭಯಭೀತರಾಗಿ ನಡುಗುತ್ತಿರುತ್ತಾರೆ.

(ಹುಝೂರ್ ಹೇಳಿದರು:) ಪವಿತ್ರ ಖುರ್‌ಆನಿನಲ್ಲಿ ವಿವರಿಸಲಾದ ಅಥವಾ ಹಝ್ರತ್ ಮಸೀಹ್ ಮೌಊದ್(ಅ) ಹೇಳಿದ ಈ ಸಂಗತಿ ಕೇವಲ ಒಂದು ಘಟನೆಯಲ್ಲ. ಬದಲಾಗಿ ಹಝ್ರತ್ ಪೈಗಂಬರ್(ಸ) ನಮಗೆ ಉತ್ತಮ ಮಾದರಿಯಾಗಿದ್ದಾರೆ ಎಂಬ ಪಾಠವನ್ನು ನಮಗೆ ನೀಡಲಾಗಿದೆ. ಆದ್ದರಿಂದ ಹಝ್ರತ್ ಪೈಗಂಬರ್(ಸ)ರನ್ನು ಪ್ರೀತಿಸುತ್ತೀರಿ ಎಂದು ನೀವು ವಾದಿಸುವುದಾದರೆ ನೀವು ಕೂಡ ವಿನಯ ಮತ್ತು ನಮ್ರತೆಯ ಉನ್ನತ ಮಟ್ಟವನ್ನು ಸಾಧಿಸಲು ಪ್ರಯತ್ನಿಸಿರಿ.

ಹಝ್ರತ್ ಪೈಗಂಬರ್(ಸ) ಹೇಳಿದರು: ಪ್ರತಿಯೊಬ್ಬ ಮನುಷ್ಯನ ತಲೆಯೊಂದಿಗೆ ಎರಡು ಸರಪಳಿಗಳನ್ನು ಕಟ್ಟಲಾಗಿದೆ. ಒಂದು ಸರಪಳಿ ಆಕಾಶದ ಕಡೆಗೆ ಮತ್ತು ಇನ್ನೊಂದು ಸರಪಳಿ ಭೂಮಿಯ ಕಡೆಗೆ ಇದೆ. ಮನುಷ್ಯನು ವಿನಯ ಮತ್ತು ನಮ್ರತೆಯನ್ನು ತೋರಿಸುವಾಗ, ಆಕಾಶದ ಕಡೆಗಿರುವ ಸರಪಳಿಯನ್ನು ಹಿಡಿದಿರುವ ದೇವದೂತನು ಆ ಸರಪಳಿಯನ್ನು ಮೇಲಕ್ಕೆ ಎತ್ತುತ್ತಾನೆ; ಅವನು ಅಹಂಕಾರ ಹಾಗೂ ಗರ್ವದಿಂದ ವರ್ತಿಸುವಾಗ, ಭೂಮಿಯ ಕಡೆಗಿರುವ ಸರಪಳಿಯು ಅವನನ್ನು ಕೆಳಗೆ ಎಳೆಯುತ್ತದೆ; ಮನುಷ್ಯನು ವಿನಯವನ್ನು ಕೈಗೊಳ್ಳುವಾಗ ಅಲ್ಲಾಹನು ಅವನನ್ನು ಏಳನೇ ಆಕಾಶದ ವರೆಗೆ ಎತ್ತುತ್ತಾನೆ.

ಹಝ್ರತ್ ಪೈಗಂಬರ್(ಸ) ಸ್ವತಃ ಹೊಂದಿದ್ದ ವಿನಯದ ಮಟ್ಟ ಹೇಗಿತ್ತು? ಈ ನಿಟ್ಟಿನಲ್ಲಿ ಹಝ್ರತ್ ಅನಸ್(ರ)ರಿಂದ ಹೀಗೆ ವರದಿಯಾಗಿದೆ: ಒಮ್ಮೆ ಒಬ್ಬ ವ್ಯಕ್ತಿಯು ಹಝ್ರತ್ ಪೈಗಂಬರ್(ಸ)ರನ್ನು ಸಂಬೋಧಿಸುತ್ತಾ, ಹೇ ನಮ್ಮ ನಾಯಕರ ನಾಯಕರೇ, ಹೇ ಶ್ರೇಷ್ಠರಲ್ಲಿ ಶ್ರೇಷ್ಠರೇ ಎಂದು ಹೇಳಿದರು. ಆತನ ಈ ಮಾತನ್ನು ಕೇಳಿ ಹಝ್ರತ್ ಪೈಗಂಬರ್(ಸ) ಹೇಳಿದರು: ಜನರೇ! ದೇವಭಕ್ತಿಯನ್ನು ಕಡ್ಡಾಯವಾಗಿ ಕೈಗೊಳ್ಳಿರಿ. ಶೈತಾನ ನಿಮ್ಮನ್ನು ದಾರಿ ತಪ್ಪಿಸದಿರಲಿ; ನಾನು ಮುಹಮ್ಮದ್ ಬಿನ್ ಅಬ್ದುಲ್ಲಾಹ್; ಅಲ್ಲಾಹನ ದಾಸ ಮತ್ತು ಅವನ ಸಂದೇಶವಾಹಕ ಆಗಿದ್ದೇನೆ. ಅಲ್ಲಾಹನ ಆಣೆ! ಅಲ್ಲಾಹನು ನನಗೆ ನೀಡಿದ ಸ್ಥಾನಮಾನಕ್ಕಿಂತ ಹೆಚ್ಚಾಗಿ ನೀವು ನನ್ನನ್ನು ಹೊಗಳುವುದನ್ನು ನಾನು ಇಷ್ಟಪಡುವುದಿಲ್ಲ. ಅದೇ ರೀತಿ ಹಝ್ರತ್ ಪೈಗಂಬರ್(ಸ) ಹೇಳಿದರು, ಯಾರದೇ ಕರ್ಮಗಳು ಅವನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸದು. ಸಹಾಬಿಯರು ಕೇಳಿದರು: ಅಲ್ಲಾಹನ ಪ್ರವಾದಿಯೇ ನಿಮ್ಮನ್ನು ಕೂಡ? ಹಝ್ರತ್ ಪೈಗಂಬರ್(ಸ) ಹೇಳಿದರು ಇಲ್ಲ, ನನ್ನನ್ನು ಕೂಡ, ಅಲ್ಲಾಹನು ತನ್ನ ಕೃಪೆಯಿಂದ ನನ್ನನ್ನು ಆವರಿಸಿಕೊಂಡರೆ ಮಾತ್ರ ನನ್ನನ್ನು ಸ್ವರ್ಗಕ್ಕೆ ಪ್ರವೇಶಗೊಳಿಸಲಾಗುವುದು.

ಹಝ್ರತ್ ಪೈಗಂಬರ್(ಸ) ಹೀಗೆ ದುಆ ಮಾಡುತ್ತಿದ್ದರು: ಹೇ ನನ್ನ ಅಲ್ಲಾಹ್, ನನ್ನನ್ನು ಬಡವನಾಗಿ ಜೀವಿಸುವಂತೆ ಮಾಡು, ಮತ್ತು ಬಡವನಾಗಿಯೇ ಮರಣ ನೀಡು, ಹಾಗೂ ಬಡವರ ಗುಂಪಿನಲ್ಲಿ ನನ್ನನ್ನು ಎಬ್ಬಿಸು. ಮಾನಸಿಕವಾಗಿ ಸ್ವಲ್ಪ ಅಸ್ವಸ್ಥಿಯಾಗಿದ್ದ ಮಹಿಳೆಯೊಬ್ಬಳು ಹಝ್ರತ್ ಪೈಗಂಬರ್(ಸ)ರೊಡನೆ ಹೀಗೆ ಹೇಳಿದಳು: ಹೇ ಮುಹಮ್ಮದ್(ಸ), ನನಗೆ ನಿಮ್ಮಿಂದ ಒಂದು ಕೆಲಸವಿದೆ; ಹಝ್ರತ್ ಪೈಗಂಬರ್(ಸ) ಹೇಳಿದರು: ಎಲ್ಲೈ ತಾಯಿ, ನೀನು ಇಚ್ಛಿಸುವ ಯಾವುದೇ ಬೀದಿಗೆ ನನ್ನನ್ನು ಕರೆದುಕೊಂಡು ಹೋಗು, ಅಲ್ಲಿ ನಾನು ನಿನ್ನ ಕೆಲಸವನ್ನು ಮಾಡಿಕೊಡುತ್ತೇನೆ.

ಹಝ್ರತ್ ಪೈಗಂಬರ್(ಸ) ಅನ್ಸಾರಿಗಳ ಬಳಿ ಹೋಗುವಾಗ ಅವರ ಮಕ್ಕಳಿಗೆ ಸಲಾಂ ಹೇಳುತ್ತಿದ್ದರು, ಅವರ ತಲೆ ಸವರುತ್ತಿದ್ದರು ಮತ್ತು ಅವರಿಗಾಗಿ ದುಆ ಮಾಡುತ್ತಿದ್ದರು; ಒಮ್ಮೆ ಒಬ್ಬ ವ್ಯಕ್ತಿಯು ಹಝ್ರತ್ ಪೈಗಂಬರ್(ಸ)ರ ಸನ್ನಿಧಿಯಲ್ಲಿ ಹಾಜರಾಗಿ ಅವರೊಂದಿಗೆ ಮಾತನಾಡಿದರು. ಹಝ್ರತ್ ಪೈಗಂಬರ್(ಸ)ರ ಪ್ರಭಾವ ವಲಯದಿಂದಾಗಿ ಆತನ ಭುಜಗಳು ನಡುಗಲಾರಂಭಿಸಿದವು, ಆಗ ಹಝ್ರತ್ ಪೈಗಂಬರ್(ಸ) ಹೇಳಿದರು: ಶಾಂತವಾಗಿರು, ನಾನೇನೂ ರಾಜನಲ್ಲ, ನಾನು ಒಣಮಾಂಸವನ್ನು ತಿನ್ನುತ್ತಿದ್ದಂತಹ ಮಹಿಳೆಯೊಬ್ಬಳ ಮಗನಾಗಿದ್ದೇನೆ; ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಅಲ್ಲಾಹನು ನಮ್ಮ ಪೈಗಂಬರ್(ಸ)ರಿಗೆ ಯಶಸ್ಸುಗಳನ್ನು ನೀಡಿದಾಗಲೆಲ್ಲ ಅವರು ಮತ್ತಷ್ಟು ವಿನಯ ಮತ್ತು ನಮ್ರತೆಯನ್ನು ತೋರಿಸುತ್ತಾ ಹೋದರು.

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿದರು: ಕ್ರೈಸ್ತರು ಮರಿಯಮರ ಪುತ್ರನ ಹೊಗಳಿಕೆಯಲ್ಲಿ ಮಿತಿಮೀರಿದಂತೆ ನೀವು ನನ್ನ ಹೊಗಳಿಕೆಯಲ್ಲಿ ಅತಿರೇಕ ತೋರಬೇಡಿರಿ. ನಾನು ಕೇವಲ ಅಲ್ಲಾಹನ ದಾಸನಾಗಿದ್ದೇನೆ; 'ಅಲ್ಲಾಹನ ದಾಸ ಮತ್ತು ಅವನ ಸಂದೇಶವಾಹಕ' ಎಂದಷ್ಟೇ ನೀವು ಹೇಳಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ಯಾರು ಕೂಡ ನನ್ನನ್ನು ಯೂನುಸ್ ಬಿನ್ ಮತ್ತಾ(ಅ)ರಿಗಿಂತ ಶ್ರೇಷ್ಠನೆಂದು ಹೇಳಬಾರದು. ಶ್ರೇಷ್ಠರಾಗಿದ್ದರೂ, ವಿನಯದಿಂದಾಗಿ ಹಝ್ರತ್ ಪೈಗಂಬರ್(ಸ) ತಮ್ಮ ಶ್ರೇಷ್ಠತೆಯನ್ನು ವ್ಯಕ್ತಪಡಿಸುವುದನ್ನು ನಿಷೇಧಿಸಿದರು; ಒಬ್ಬ ವ್ಯಕ್ತಿಯು ಹಝ್ರತ್ ಪೈಗಂಬರ್(ಸ)ರನ್ನು **'ಖೈರುಲ್ ಬರಿಯ್ಯ'** (ಸೃಷ್ಟಿಗಳಲ್ಲಿ ಅತ್ಯುತ್ತಮರು) ಎಂದು ಹೇಳಿದಾಗ ಅದು ಇಬ್ರಾಹೀಂ(ಅ) ಆಗಿದ್ದರು ಎಂದು ಹಝ್ರತ್ ಪೈಗಂಬರ್(ಸ) ಹೇಳಿದರು.

(ಹುಝೂರ್ ಹೇಳಿದರು:) ಖಂಡಿತವಾಗಿಯೂ ಹಝ್ರತ್ ಪೈಗಂಬರ್(ಸ) ಸೃಷ್ಟಿಗಳಲ್ಲೇ ಅತ್ಯುತ್ತಮರಾಗಿದ್ದರು ಮತ್ತು ಈಗಲೂ ಆಗಿದ್ದಾರೆ ಹಾಗೂ ಖೈರುಲ್ ಬರಿಯ್ಯ ಆಗಿದ್ದಾರೆ, ಆದರೆ ಹಝ್ರತ್ ಪೈಗಂಬರ್(ಸ) ಅತ್ಯಂತ ವಿನಯದಿಂದ ಅದು ಹಝ್ರತ್ ಇಬ್ರಾಹೀಂ(ಅ) ಆಗಿದ್ದರು ಎಂದು ಹೇಳಿದರು.

ಮಕ್ಕಾ ವಿಜಯದ ನಂತರ, ಹಝ್ರತ್ ಪೈಗಂಬರ್(ಸ) ಒಂದು ಲಕ್ಷ ಸಹಾಬಿಯರೊಂದಿಗೆ ಹಜ್ ಮಾಡಿದರು, ಆ ಸಮಯದಲ್ಲಿ ಹಝ್ರತ್ ಪೈಗಂಬರ್(ಸ)ರ ವಿನಯದ ಸ್ಥಿತಿ ಹೇಗಿತ್ತೆಂದರೆ, ಹಝ್ರತ್ ಪೈಗಂಬರ್(ಸ) ಸಾಮಾನ್ಯ ಜೀನು ಇರುವ ಸವಾರಿಯ ಮೇಲೆ ಹಜ್ ಮಾಡಿದರು, ಅವರ ಚಾದರವು ನಾಲ್ಕು ದಿರ್ಹಮ್ ಅಥವಾ ಅದಕ್ಕಿಂತಲೂ ಕಡಿಮೆ ಬೆಲೆಯದ್ದಾಗಿತ್ತು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ಅಹ್ಮದ್ ಎಂಬ ಹೆಸರು ಸೌಂದರ್ಯದ ಸಂಕೇತವಾಗಿದೆ ಮತ್ತು ಅದಕ್ಕೆ ಪ್ರತಿಯಾಗಿ ಮುಹಮ್ಮದ್ ಎಂಬ ಹೆಸರು ವೈಭವದ ಸಂಕೇತವಾಗಿದೆ. ಕಾರಣವೇನೆಂದರೆ, ಮುಹಮ್ಮದ್ ಎಂಬ ಹೆಸರಿನಲ್ಲಿ ಪ್ರೀತಿಸಲ್ಪಡು ಎಂಬ ಅರ್ಥ ಅಡಕವಾಗಿದೆ ಮತ್ತು ಅಹ್ಮದ್ ಎಂಬ ಹೆಸರಿನಲ್ಲಿ ಪ್ರೀತಿಸುವುದು ಎಂಬ ಅರ್ಥ ಅಡಕವಾಗಿದೆ... ಮುಹಮ್ಮದ್ ಎಂಬ ಹೆಸರಿನಲ್ಲಿ ಅಡಗಿದ್ದ ಪ್ರೀತಿಸಲ್ಪಡು ಎಂಬುದು ಸಹಾಬಿಯರ ಮೂಲಕ ಬಹಿರಂಗವಾಯಿತು. ನಿಂದಿಸುವವರನ್ನು ಮತ್ತು ಅಹಂಕಾರಿಗಳನ್ನು ಅಲ್ಲಾಹನ ಪ್ರಿಯದಾಸ ಎಂಬ ವೈಭವವು ದಮನ ಮಾಡಿತು.

ಹಝ್ರತ್ ಅನಸ್[ರ]ರಿಂದ ಹೀಗೆ ವರದಿಯಾಗಿದೆ: ಹಝ್ರತ್ ಪೈಗಂಬರ್[ಸ] ರೋಗಿಗಳ ಕ್ಷೇಮ ವಿಚಾರಿಸುತ್ತಿದ್ದರು, ಮೃತರ ಜನಾಝದಲ್ಲಿ ಪಾಲ್ಗೊಳ್ಳುತ್ತಿದ್ದರು. ಸವಾರಿಗಾಗಿ ಕತ್ತೆಯನ್ನೂ ಉಪಯೋಗಿಸುತ್ತಿದ್ದರು. ಗುಲಾಮರ ಆಮಂತ್ರಣವನ್ನು ಸ್ವೀಕರಿಸುತ್ತಿದ್ದರು; ಹಝ್ರತ್ ಪೈಗಂಬರ್[ಸ] ಜನರ ಭಾವನೆಗಳಿಗೆ ಎಷ್ಟು ಕಾಳಜಿ ತೋರಿಸುತ್ತಿದ್ದರು ಎಂಬುದರ ಉದಾಹರಣೆ ಹೀಗೆ ಸಿಗುತ್ತದೆ: ಒಮ್ಮೆ ಹಝ್ರತ್ ಪೈಗಂಬರ್[ಸ] ಒಬ್ಬ ಕುಷ್ಠರೋಗಿಯ ಕೈ ಹಿಡಿದು ಆತನನ್ನು ತಮ್ಮ ಪಾತ್ರೆಯಲ್ಲಿ ಜೊತೆಯಾಗಿಸಿಕೊಂಡರು ಮತ್ತು ಹೀಗೆ ಹೇಳಿದರು: ಅಲ್ಲಾಹನ ಹೆಸರನ್ನು ಹೇಳಿ ತಿನ್ನು, ಅವನ ಮೇಲೆ ಭರವಸೆ ಮತ್ತು ನಂಬಿಕೆಯಿಡು.

ಒಂದು ಪ್ರಯಾಣದಲ್ಲಿ ಹಝ್ರತ್ ಪೈಗಂಬರ್[ಸ] ಆಡಿನ ಮಾಂಸವನ್ನು ಬೇಯಿಸಲು ಹೇಳಿದಾಗ, ಆಡನ್ನು ಕೊಯ್ಯುವುದು, ಚರ್ಮ ಸುಲಿಯುವುದು ಮತ್ತು ಅಡುಗೆ ಮಾಡುವುದು ಮುಂತಾದ ಕೆಲಸಗಳನ್ನು ಜನರು ತಮ್ಮ ತಮ್ಮೊಳಗೆ ಹಂಚಿಕೊಂಡರು. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: ಉರುವಲು ಕಟ್ಟಿಗೆ ಸಂಗ್ರಹಿಸುವುದು ನನ್ನ ಜವಾಬ್ದಾರಿಯಾಗಿದೆ; ಸಹಾಬಿಯರು ಹೇಳಿದರು: ಅಲ್ಲಾಹನ ಪ್ರವಾದಿಯೇ, ನಿಮಗಾಗಿ ನಾವು ಸಾಕು. ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: ನೀವು ಸಾಕು ಎಂಬುದು ನನಗೆ ಗೊತ್ತು, ಆದರೆ ನಾನು ನಿಮ್ಮಲ್ಲಿ ವಿಶಿಷ್ಟನಾಗಿ ಕಾಣಲು ಇಷ್ಟಪಡುವುದಿಲ್ಲ, ಏಕೆಂದರೆ ಅಲ್ಲಾಹನು ತನ್ನ ದಾಸನು ಜನರಲ್ಲಿ ವಿಶಿಷ್ಟನಾಗಿ ಕಾಣಿಸಿಕೊಳ್ಳುವುದನ್ನು ಇಷ್ಟಪಡುವುದಿಲ್ಲ.

ಹಝ್ರತ್ ಆಯಿಶ[ರ] ಹೇಳುತ್ತಾರೆ: ಹಝ್ರತ್ ಪೈಗಂಬರ್[ಸ] ಮನೆಯ ಕೆಲಸಗಳಲ್ಲಿ ಮನೆಯವರಿಗೆ ಸಹಾಯ ಮಾಡುತ್ತಿದ್ದರು ಮತ್ತು ನಮಾಝಿನ ಸಮಯವಾದರೆ ನಮಾಝಿಗಾಗಿ ತೆರಳುತ್ತಿದ್ದರು. (ಹುಝೂರ್ ಹೇಳಿದರು:) ಇದರಲ್ಲಿ ಮನೆಗೆಲಸ ಮಾಡುವುದನ್ನು ಸಂಪೂರ್ಣವಾಗಿ ನಿರಾಕರಿಸುವ ಮೂಲಕ ಪತ್ನಿಯರ ದೂರುಗಳಿಗೆ ಕಾರಣವಾಗುವಂತಹ ಪುರುಷರಿಗೂ ಮಾರ್ಗದರ್ಶನವಿದೆ. ಹಝ್ರತ್ ಪೈಗಂಬರ್[ಸ] ತಮ್ಮ ಪಾದರಕ್ಷೆಗಳನ್ನು ತಾವೇ ಸರಿಪಡಿಸಿಕೊಳ್ಳುತ್ತಿದ್ದರು, ತಮ್ಮ ಬಟ್ಟೆಗಳನ್ನು ಹೊಲಿಯುತ್ತಿದ್ದರು ಮತ್ತು ನಿಮ್ಮಲ್ಲಿ ಯಾರಾದರೂ ತಮ್ಮ ಮನೆಯಲ್ಲಿ ಕೆಲಸ ಮಾಡುವಂತೆಯೇ ಹಝ್ರತ್ ಪೈಗಂಬರ್[ಸ] ತಮ್ಮ ಮನೆಯಲ್ಲಿ ಕೆಲಸ ಮಾಡುತ್ತಿದ್ದರು.

(ಹುಝೂರ್ ಹೇಳಿದರು:) ಇದರಿಂದ ಸಹಾಬಿಯರು ಕೂಡ ತಮ್ಮ ಮನೆಯಲ್ಲಿ ಪತ್ನಿಯರಿಗೆ ಸಹಾಯ ಮಾಡುತ್ತಿದ್ದರು ಎಂಬ ಸಂಗತಿ ತಿಳಿದುಬರುತ್ತದೆ, ಆದರೆ ಇಲ್ಲಿ ಮನೆಯ ಕೆಲಸಗಳ ನಿಜವಾದ ಜವಾಬ್ದಾರಿ ಪತ್ನಿಯರದೇ ಆಗಿದೆ ಎಂಬುದು ಗೊತ್ತಿರಬೇಕು.

ತಮ್ಮೊಡನೆ ವಿಶೇಷವಾಗಿ ವರ್ತಿಸುವುದನ್ನು ಹಝ್ರತ್ ಪೈಗಂಬರ್[ಸ] ಯಾವಾಗಲೂ ನಿರಾಕರಿಸುತ್ತಿದ್ದರು. ಹಝ್ರತ್ ಪೈಗಂಬರ್[ಸ] ಮಸ್ಜಿದ್ ನಬವಿಯ ನಿರ್ಮಾಣದ ಸಮಯದಲ್ಲಿ ಇಟ್ಟಿಗೆಗಳನ್ನು ಹೊರುವ ಕೆಲಸದಲ್ಲಿ ಜನರೊಂದಿಗೆ ಸೇರಿಕೊಂಡರು, ಕಂದಕವನ್ನು ಅಗೆಯುವಾಗ ಮಣ್ಣನ್ನು ಹೊತ್ತರು ಮತ್ತು ಹಝ್ರತ್ ಪೈಗಂಬರ್[ಸ]ರ ಸ್ಥಿತಿ ಹೇಗಿತ್ತೆಂದರೆ, ಮಣ್ಣು ಅವರ ಎದೆಯ ಕೂದಲುಗಳನ್ನು ಮುಚ್ಚಿಹಾಕಿತ್ತು. ಒಂದು ಸಂದರ್ಭದಲ್ಲಿ, ಹಝ್ರತ್ ಪೈಗಂಬರ್[ಸ] ಆಗಮಿಸಿದಾಗ ಸಹಾಬಿಯರು ಎದ್ದು ನಿಂತರು, ಆಗ ಹಝ್ರತ್ ಪೈಗಂಬರ್[ಸ] ಹೇಳಿದರು: ಪರ್ಷಿಯನ್ನರು ತಮ್ಮ ಹಿರಿಯರಿಗೆ ಮಾಡುವಂತೆ ಮಾಡಬೇಡಿರಿ.

ಹಝ್ರತ್ ಮುಸ್ಲಿಹ್ ಮೌಊದ್[ರ] ಹೇಳುತ್ತಾರೆ: ತಾವು ಬರುವಾಗ ಜನರು ಎದ್ದು ನಿಲ್ಲುವುದನ್ನು ಹಝ್ರತ್ ಪೈಗಂಬರ್[ಸ] ನಿಷೇಧಿಸುತ್ತಿದ್ದರು ಮತ್ತು ಇದು ಇರಾನಿಯರ ಸಂಪ್ರದಾಯವಾಗಿದೆ ಎಂದೂ ನಾನೇನೂ ರಾಜನಲ್ಲ ಎಂದೂ ಹೇಳುತ್ತಿದ್ದರು.

ಹಝ್ರತ್ ಮಸೀಹ್ ಮೌಊದ್[ಅ] ಹೇಳುತ್ತಾರೆ: ನನ್ನ ಪ್ರಕಾರ ಪರಿಶುದ್ಧರಾಗಲು ಇದು ಅತ್ಯುತ್ತಮ ಮಾರ್ಗವಾಗಿದೆ ಮತ್ತು ಇದಕ್ಕಿಂತ ಉತ್ತಮವಾದ ಮಾರ್ಗ ಬೇರೆ ಇರಲು ಸಾಧ್ಯವಿಲ್ಲ. ಅದೇನೆಂದರೆ, ಮನುಷ್ಯನು ಯಾವುದೇ ರೀತಿಯ ಅಹಂಕಾರ ಮತ್ತು ಗರ್ವವನ್ನು ತೋರಿಸಬಾರದು. ಅದು ಜ್ಞಾನದ ಬಗ್ಗೆಯಾದರೂ, ಕುಟುಂಬದ ಬಗ್ಗೆಯಾದರೂ ಅಥವಾ ಸಂಪತ್ತಿನ ಬಗ್ಗೆಯಾದರೂ ಸರಿ. ಮನುಷ್ಯನು ಉನ್ನತ ವಂಶದ ಮತ್ತು ಉನ್ನತ ಸ್ಥಾನಮಾನದ ವ್ಯಕ್ತಿಯೊಂದಿಗೆ ತೋರುವ ಅಥವಾ ತೋರಬೇಕಾದಂತಹ ನೈತಿಕತೆಯನ್ನು ಓರ್ವ ಬಡ ಮತ್ತು ಅಸಹಾಯಕ ವೃದ್ಧೆಯೊಂದಿಗೆ ತೋರುವವರೆಗೂ

ಹಾಗೂ ಎಲ್ಲ ರೀತಿಯ ಅಹಂಕಾರ, ಗರ್ವ ಮತ್ತು ದುರಹಂಕಾರದಿಂದ ತನ್ನನ್ನು ತಾನು ರಕ್ಷಿಸಿಕೊಳ್ಳುವ ವರೆಗೂ ಅವನು ಖಂಡಿತವಾಗಿಯೂ ದೇವನ ಸಾಮ್ರಾಜ್ಯವನ್ನು ಪ್ರವೇಶಿಸಲು ಸಾಧ್ಯವಿಲ್ಲ.

(ಹುಝೂರ್ ಹೇಳಿದರು:) ಅಲ್ಲಾಹನು ನಮಗೆ ವಿನಯದ ನೈಜತೆಯನ್ನು ಅರ್ಥಮಾಡಿಕೊಳ್ಳಲು ಮತ್ತು ಹಝ್ರತ್ ಪೈಗಂಬರ್[ಸ]ರ ಮಾದರಿಯನ್ನು ಯಾವಾಗಲೂ ಮುಂದಿಟ್ಟುಕೊಳ್ಳುವ ಸೌಭಾಗ್ಯವನ್ನು ದಯಪಾಲಿಸಲಿ. ಆಮೀನ್.

——————————*****——————————

اَلْحَمْدُلِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ

مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ

فَلَاهَادِىَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُاَنَّ مُحَمَّدًا عَبْدُهٗ وَرَسُوْلُهٗ

عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَاءِ ذِى الْقُرْبٰى

وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ

يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.


***Friday Sermon delivered by Hadrath Khaleefatul Masih Al Khamis*** *(atba)*

At, ***'Masjid Mubarak',*** *Islamabad, Tilford,* U.K. On 15-05-2026

**Summarized by** *Majlis Ansarullah Bharat*

***Kannada Translation****:* Moulavi Inamullah for Kannada Desk, Qadian

***Reviewed by****:* M.P Ibrahim | ***Layout****:* Basheer K.P. Manjeshwar

***Published By****:* Kannada Isha'at Team for Nazarath Nashr-O-Isha'ath, Qadian



***Email***: *khutuba.kannada@gmail.com*



**You can find all the Sermons archived at**: www.alislam.org/friday-sermon